that, design ಏನಾದರೂ change ಮಾಡಿ sleeper bus ಮಾಡಲಿಕ್ಕೆ ಸಾಧ್ಯವಿದ್ದರೆ ಅಥವಾ ಬೇರೆ ಯಾವುದಾದರೂ Tata maker ಅನ್ನು sleeper ಅಗಿ ಪರಿವರ್ತನೆ ಮಾಡಲಿಕ್ಕೆ ಸಾಧ್ಯವಿದ್ದರೆ, ಅಂತಹ ಒಂದು optionಗಳನ್ನು ಇಟ್ಟುಕೊಂಡು ತಾವು sleeper bus ಗಳನ್ನು procurement ಮಾಡಲಿಕ್ಕೆ ಪ್ರಯತ್ನ ಮಾಡಿ. ಏಕೆಂದರೆ quality-wise ಆ ಬಸ್‌ಗಳು ಅಷ್ಟೊಂದು ಸರಿಯಿಲ್ಲ.

ಶ್ರೀ ಆರ್.ಅಶೋಕ್: ಮಾನ್ಯ ನಾಡಗೌಡರು ಏನು ಸಲಹೆ ಕೊಟ್ಟಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ. ತಾವು concession ಬೇರೆ ಭಾಗಕ್ಕೆ ಕೊಟ್ಟಿದ್ದೀರಿ, ಅದೇ ರೀತಿ ಈ ಭಾಗಕ್ಕೂ ಕೊಡಬೇಕೆಂದು ಹೇಳಿದ್ದೀರಿ. ಸಭೆಯನ್ನು ಕರೆಯುತ್ತಿದ್ದೇನೆ. ಈ ವಾರದಲ್ಲೇ ಅಧ್ಯಕ್ಷರ ಸಮಯವನ್ನು ನೋಡಿಕೊಂಡು fix ಮಾಡುತ್ತೇನೆ. ನಂಜುಂಡಪ್ಪ ವರದಿ ಪ್ರಕಾರ ಸರ್ಕಾರದಿಂದ 30 ಕೋಟಿ ರೂ. ಅನುದಾನ ಬಂದಿದೆ. ಅದನ್ನು ಯಾವ ರೀತಿ ಖರ್ಚು ಮಾಡಬೇಕು ಮತ್ತು ಏನು losses ಆಗುತ್ತಿದೆ. ಇದಕ್ಕೆ ಕರ್ನಾಟಕದಾದ್ಯಂತ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಆ ಭಾಗದ ಶಾಸಕರ ಸಭೆಯನ್ನು ನಾನು ಕರೆಯುತ್ತಿದ್ದೇನೆ. ಈ ವಾರದಲ್ಲಿಯೇ ಸನ್ಮಾನ್ಯ ಅಧ್ಯಕ್ಷರ ಸಮಯ ನೋಡಿಕೊಂಡು ಸಭೆಯ ದಿನಾಂಕ ನಿಗದಿ ಪಡಿಸುತ್ತೇನೆ. ಆ ಸಂದರ್ಭದಲ್ಲಿ ನಂಜುಂಡಪ್ಪನವರ ವರದಿ ರೀತ್ಯಾ ಬಂದಿರುವ ಹಣ ಮತ್ತು ಲಾಸ್ ಆಗುತ್ತಿರುವುದನ್ನು ಹೇಗೆ fulfill ಮಾಡುವುದು ಮತ್ತು ಅದನ್ನು ಅಭಿವೃದ್ಧಿಗೊಳಿಸುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಕೈಗೊಳ್ಳುತ್ತೇನೆ.

ಕೆ.ಆರ್.ನಗರ ತಾಲ್ಲೂಕಿನಲ್ಲಿ ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿರುವ ಬಗ್ಗೆ

59(207) ಶ್ರೀ ಮಹೇಶ್ ಎಸ್.ಆರ್.(ಕೃಷ್ಣರಾಜನಗರ)
ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಸಾಗರ್ ಕಟ್ಟೆ ಸೇತುವೆಯ ಕಾಮಗಾರಿ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿರುತ್ತದೆ.

ಆ) ಹಾಗಿದ್ದಲ್ಲಿ, ಎಷ್ಟು ವರ್ಷಗಳಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ;

ಈ ಕಾಮಗಾರಿಯು ಜುಲೈ 2007 ರಲ್ಲಿ ಸ್ಥಗಿತಗೊಂಡಿರುತ್ತದೆ.

ಇ) ಈ ಸೇತುವೆಯ ಕಾಮಗಾರಿಗಾಗಿ ಸರ್ಕಾರ ನಿಗಧಿಪಡಿಸಿದ್ದ ಅನುದಾನವೆಷ್ಟು;

ಈ ಸೇತುವೆಯ ಕಾಮಗಾರಿಗೆ 10.00 ಕೋಟಿ ರೂ.ಗಳನ್ನು ಅನುಮೋದಿಸಲಾಗಿದೆ. ಆದರೆ, ವಿವರವಾದ ವಿನ್ಯಾಸದ ಪ್ರಕಾರ ಅಂದಾಜು ಪಟ್ಟಿಯನ್ನು ತಯಾರಿಸಿದಾಗ ಸೇತುವೆಯ ಅಂದಾಜು ಮೊತ್ತವು 22.3 ಕೋಟಿ ರೂ.ಗಳಾಗಿರುತ್ತದೆ.

ಈ) ನಿಗದಿಪಡಿಸಿದ್ದ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆಯೇ;

ಈಗಾಗಲೇ ಈ ಕಾಮಗಾರಿಗೆ 7.00 ಕೋಟಿ ರೂ.ಗಳು ಬಿಡುಗಡೆಯಾಗಿದೆ.

ಉ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಹೆಚ್ಚಿನ ಅನುದಾನ ಅವಶ್ಯಕತೆಯ ಕಾರಣ ಕಾಮಗಾರಿಯನ್ನು ಮುಂದುವರಿಸಲಾಗಿರುವುದಿಲ್ಲ.

ಊ) ಸಾಗರ್ ಕಟ್ಟೆ ಸೇತುವೆಯ ಕಾಮಗಾರಿಯನ್ನು ಶೀಘ್ರವೇ ಪ್ರಾರಂಭಿಸಲಾಗುವುದೇ;

ಅನುದಾನದ ಲಭ್ಯತೆ ಮೇರೆಗೆ ಈ ಕಾಮಗಾರಿಯನ್ನು ಪುನರಾರಂಭಿಸುವ ಬಗ್ಗೆ ಪರಿಗಣಿಸಲಾಗುವುದು.

ಋ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು (ಗುತ್ತಿಗೆದಾರರ ವಿವರಗಳನ್ನು ನೀಡುವುದು)

ಈ ಕಾಮಗಾರಿಯನ್ನು ಅನುದಾನ ಲಭ್ಯತೆಯ ಮೇಲೆ ತೆಗೆದುಕೊಳ್ಳಲಾಗುವುದು. ಈ ಕಾಮಗಾರಿಯನ್ನು ಗುತ್ತಿಗೆದಾರರಾದ ಮೆ:ಗ್ಯಾಮನ್ ಇಂಡಿಯ, ಮುಂಬೈ ಇವರಿಗೆ ವಹಿಸಿಕೊಡಲಾಗಿದೆ.

ಶ್ರೀ ಎಸ್.ಆರ್.ಮಹೇಶ್: ಮಾನ್ಯ ಅಧ್ಯಕ್ಷರೆ, ಕೆ.ಆರ್.ನಗರದಲ್ಲಿ ಹಿನ್ನೀರಿಗೆ ಕಟ್ಟುತ್ತಿರುವ ಸೇತುವೆ ಇದಾಗಿದೆ. ಇದು ದಿನಾಂಕ 25.9.2006ರಲ್ಲಿ ಹಿಂದಿನ ಮುಖ್ಯಮಂತ್ರಿಗಳಾಗಿದ್ದವರು ಶಂಕುಸ್ಥಾಪನೆ ಮಾಡಿರುವ ಸೇತುವೆಯಾಗಿದೆ. ಅವತ್ತಿನ ದಿವಸ ಸುಮಾರು 24 ಕೋಟಿ ರೂ.ಗಳನ್ನು ಮಂಜೂರು ಮಾಡಿ ಕೆಲಸ ಪ್ರಾರಂಭಿಸಿದ್ದಾರೆ. ಈಗಾಗಲೇ 7 ಕೋಟಿ ರೂ.ಗಳನ್ನು ಗುತ್ತಿಗೆದಾರರಿಗೆ ಪಾವತಿಸಿದ್ದಾರೆ. ಒಟ್ಟು 13 ಪಿಲ್ಲರ್‌ಗಳ ಪೈಕಿ 9 ಪಿಲ್ಲರ್‌ಗಳ ಕಾಮಗಾರಿ ಪೂರ್ತಿಗೊಂಡಿದೆ. ಇನ್ನು 3 ಪಿಲ್ಲರ್‌ಗಳು ಅರ್ಧಂಬರ್ಧಕ್ಕೆ ನಿಂತಿವೆ. ದಯಮಾಡಿ ಇವತ್ತು ಮಾನ್ಯ ಸಚಿವರು ಯಾವಾಗ ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಅನುದಾನ ಲಭ್ಯತೆ ಮೇರೆಗೆ ಪ್ರಾರಂಭಿಸುವುದಾಗಿ ತಿಳಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ಸುಮಾರು 2006ರಲ್ಲಿ ಕಾಮಗಾರಿ ಪ್ರಾರಂಭಗೊಂಡು 2007ರಲ್ಲಿ ಸ್ಥಗಿತಗೊಂಡಿದೆ. ಆದರೆ, ಇದುವರೆಗೂ ಸುಮಾರು 2–3 ವರ್ಷಗಳು ಮುಗಿಯುತ್ತಾ ಬಂದರೂ ಕಾಮಗಾರಿಗಳು ಪುನಃ ಪ್ರಾರಂಭವಾಗಿಲ್ಲ. ಮತ್ತೆ ಒಂದು ಅಂದಾಜು ಪಟ್ಟಿಯನ್ನು ತಯಾರಿಸಿದ್ದಾರೆ. ಅವತ್ತು ಅದರ ವೆಚ್ಚ ಒಟ್ಟು 24 ಕೋಟಿ ರೂಪಾಯಿಗಳಾಗಿತ್ತು. ಈಗ ಹಿಂದೆ ಖರ್ಚಾಗಿರುವ 7 ಕೋಟಿ ರೂಪಾಯಿಗಳು ಅಲ್ಲದೇ 24 ಕೋಟಿ

ರೂಪಾಯಿಗಳ ಅಂದಾಜು ಪಟ್ಟಿಯನ್ನು ಈಗಾಗಲೇ ಕೊಟ್ಟಿದ್ದಾರೆ. ದಯಮಾಡಿ ಈ ಮೂರು ವರ್ಷಗಳಲ್ಲಿ ಮಾನ್ಯ ಸಚಿವರು ಅಲ್ಲಿಗೆ ಅನುದಾನವನ್ನು ಏತಕ್ಕಾಗಿ ಕೊಡಲಿಲ್ಲ? ಈ ಇಲಾಖೆಗೆ ಏತಕ್ಕೆ ಕೊಡಲಿಲ್ಲ? ಈ ಸಂದರ್ಭದಲ್ಲಿ ಮತ್ತೆ ನೀರು ತುಂಬಿದರೆ ಇನ್ನೂ ಒಂದು ವರ್ಷ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ, ದಯಮಾಡಿ ಅವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಹಾಸನ, ಮೈಸೂರು ಮತ್ತು ಮಂಗಳೂರಿಗೆ ಇದು ಸಂಪರ್ಕ ಸೇತುವೆಯಾಗಿರುತ್ತದೆ. ಈ ಭಾಗದಲ್ಲಿ ಕೆ.ಆರ್. ನಗರಕ್ಕೆ ಸುಮಾರು 20 ಕಿಲೋಮೀಟರ್‌ಗಳಷ್ಟು ಕಡಿಮೆಯಾಗುತ್ತದೆ. ಹಾಗಾಗಿ, ಇದನ್ನು ಆದ್ಯತೆ ಮೇರೆಗೆ ಈ ಸಲ ಬರುವ ಹಣದಲ್ಲಿ ದಯಮಾಡಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಕೊಡಬೇಕೆಂದು ತಮ್ಮ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೆ, ಈ ಸೇತುವೆ ನಿರ್ಮಿಸುವ ಸಂದರ್ಭದಲ್ಲಿ 10 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಮಾಡಲು ಪ್ರಾರಂಭಿಸಿದ್ದರು. ಈಗಾಗಲೇ 7 ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೂ ಹಿನ್ನೀರಿನಲ್ಲಿರುವುದರಿಂದ ಸೇತುವೆಯನ್ನು ನಿರ್ಮಿಸಬೇಕಾಗಿರುವ ಅವಧಿ ಬೇಸಿಗೆ ಕಾಲದಲ್ಲಿ ಸೀಮಿತ ಅವಧಿಯಲ್ಲಿ ಲಭ್ಯವಾಗುತ್ತಿದೆ. ಆದರೆ, ಈಗ ಅವರು ಹೇಳಿದಂತೆ ಅದರ ಅಂದಾಜು 45 ಕೋಟಿ ರೂಪಾಯಿಗಳಿಗೆ ಹೋಗಬಹುದೆಂದೂ, 42.17 ಕೋಟಿ ರೂಪಾಯಿಗಳು ಆಗಬಹುದೆಂಬ ವಿಚಾರಕ್ಕೆ ಬರಲಾಗಿದೆ. ಮೊದಲಿನಿಂದಲೂ ಅಂದಾಜು ಮಾಡದೆ ಅಡಿಗಲ್ಲು ಸಮಾರಂಭ ನಡೆಸಿದ್ದರ ಪರಿಣಾಮ ಈ ಕೆಲಸ ಪ್ರಾರಂಭವಾಗಿದೆ ಎಂಬುದು ನಮ್ಮೆಲ್ಲರ ಗಮನಕ್ಕೆ ಬರುತ್ತಿದೆ. ಇವತ್ತು ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಾಂತ್ರಿಕ ಸಲಹಾ ಮಂಡಳಿ ಮುಂದೆ ಮಂಡಿಸಲಾಗಿದೆ. ಆದುದರಿಂದ, ಅವರಿಂದ ಮಾಹಿತಿ ಪಡೆದು ಅದಕ್ಕೆ ಅನುಮೋದನೆ ಪಡೆದುಕೊಂಡ ನಂತರ ಅತಿ ಶೀಘ್ರದಲ್ಲಿರಿಯೇ ಈ ಕೆಲಸವನ್ನು ಮಾಡಿಸಿಕೊಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಎಸ್.ಆರ್.ಮಹೇಶ್: ಅಧ್ಯಕ್ಷರೆ, ಮಾನ್ಯ ಸಚಿವರು ಮಾತನಾಡುತ್ತಾ, ಈಗಾಗಲೇ 45 ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ವೆಚ್ಚವಾಗುತ್ತಿರುವುದಾಗಿ ಹೇಳಿದ್ದಾರೆ. ಆದರೆ, ಅವತ್ತು ಅದನ್ನು ಪ್ರಾರಂಭಿಸುವಂತಹ ಸಂದರ್ಭದಲ್ಲಿ ಇದ್ದದು 24 ಕೋಟಿ ರೂಪಾಯಿಗಳು ಮಾತ್ರ. ಈ ಸಲ ಹಿನ್ನೀರಿನಲ್ಲಿ ಪ್ರಾರಂಭವಾಗಿದ್ದರೆ ಶೇಕಡ 13ರಷ್ಟು ಮಾತ್ರ ಹೆಚ್ಚಿಗೆ ಆಗುತ್ತಿತ್ತು. ಶೇಕಡ 13ರಷ್ಟು ಹೆಚ್ಚಾಗಿದ್ದರೆ, 24 ಕೋಟಿ 48 ಲಕ್ಷ ರೂಪಾಯಿಗಳೆಂದು ಮೆ: ಗ್ಯಾಮನ್ ಇಂಡಿಯಾ, ಮುಂಬೈನವರು ಕಳುಹಿಸಿದ್ದಾರೆ, ಆದರೆ, ಇವರು ಮತ್ತೆ ಮುಂದಿನ ವರ್ಷಕ್ಕೆ ಮುಂದುವರೆಸಿಕೊಂಡು ಹೋದರೆ ಅವರು ಹೇಳಿದಂತೆ 45 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗುತ್ತದೆ. ಇದರಿಂದ ಸಾರ್ವಜನಿಕರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ. ಜೊತೆಗೆ ಈಗ ಆಗುವ ಕೆಲಸಕ್ಕೂ ತೊಂದರೆಯಾಗುತ್ತದೆ. ಹಿಂದೆ 24 ಕೋಟಿ ರೂಪಾಯಿಗಳು ಇತ್ತು, ಈಗ

ಎರಡರಷ್ಟಾಗಿದೆ ಎಂದು ಇನ್ನೊಂದು ವರ್ಷಕ್ಕೆ ಮುಂದೂಡುವುದಾದರೆ ಇದೇ ರೀತಿ ಇಡೀ ರಾಜ್ಯದಲ್ಲಿರುವ ಸೇತುವೆಗಳ ಕಾಮಗಾರಿಗಳು ಅರ್ಧಂಬರ್ಧಕ್ಕೆ ನಿಲ್ಲುತ್ತವೆ. ಆದುದರಿಂದ, ದಯಮಾಡಿ ಈಗಲೇ ಇದನ್ನು ಪ್ರಾರಂಭಿಸಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಹಣಕಾಸಿನ ವಿಚಾರದಲ್ಲಿ ಮತ್ತು ಅದರ ಪರಿಷ್ಕೃತ ಅಂದಾಜು ತಾಂತ್ರಿಕ ಸಲಹಾ ಮಂಡಳಿ ಮುಂದಿರುವ ಸಂದರ್ಭದಲ್ಲಿ ಇವತ್ತು ಈ ಕುರಿತಂತೆ ಅಂತಿಮ ತೀರ್ಮಾನವಾಗಿಲ್ಲವೆಂಬುದನ್ನೂ ಅವರು ಗಮನಿಸಬೇಕು. ನಾನು ಈ ಮಾತನ್ನು ಹೇಳಿದಾಗ ಅವರು ಗಮನಿಸಲಿಲ್ಲವೆಂದು ಕಾಣುತ್ತದೆ. ಈ ವಿಷಯವು ತಾಂತ್ರಿಕ ಸಲಹಾ ಮಂಡಳಿ ಮುಂದಿರುವುದರಿಂದ ಅಂತಿಮವಾಗಿ ತೀರ್ಪು ಬಂದ ನಂತರ ಆ ಕಾರ್ಯಕ್ರಮವನ್ನು ಅತಿ ಶೀಘ್ರದಲ್ಲಿ ಮಾಡಿಸುವ ಕೆಲಸ ಮಾಡಿಸುತ್ತೇನೆ.

ವಿದ್ಯುನ್ಮಾನ ಆಡಳಿತ (E-Governance) ಜಾರಿಗೊಳಿಸುವುದು

60(382) ಶ್ರೀ ಯೋಗಿಶ್ ಭಟ್ ಎನ್.(ಮಂಗಳೂರು ನಗರ ದಕ್ಷಿಣ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿ ವಿದ್ಯುನ್ಮಾನ ಆಡಳಿತ (E-Governance) ಜಾರಿಯಲ್ಲಿದೆಯೇ?

ಹೌದು

ಆ) ವಿದ್ಯುನ್ಮಾನ ಆಡಳಿತವನ್ನು (E-Governance) ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ಹಂತದಲ್ಲಿ ಅನುಷ್ಠಾನವಾಗಿದೆ?

ಸರ್ಕಾರದ ಸೇವೆಗಳನ್ನು ಉತ್ತಮವಾಗಿ ಹಾಗೂ ತ್ವರಿತವಾಗಿ ವಿದ್ಯುನ್ಮಾನ ಮುಖೇನ ಜನರಿಗೆ ತಲುಪಿಸುವ ಸಲುವಾಗಿ ಎಲ್ಲ ಇಲಾಖೆಗಳಲ್ಲಿಯೂ ವಿದ್ಯುನ್ಮಾನ ಆಡಳಿತವನ್ನು ಜಾರಿಗೆ ತರಲು ಸರ್ಕಾರವು ಕಾರ್ಯೋನ್ಮುಖವಾಗಿದೆ. ಈ ದಿಶೆಯಲ್ಲಿ ಪ್ರಮುಖವಾದ ಇಲಾಖೆಗಳಲ್ಲಿ ಈಗಾಗಲೇ ಇ-ಆಡಳಿತವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಇವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಅನುಷ್ಠಾನ ಮಾಡದೇ ಇರುವ ಇಲಾಖೆಗಳು ಯಾವುವು?

ಈ) ಅನುಷ್ಠಾನವಾಗದೇ ಇರುವ ಇಲಾಖೆಗಳಲ್ಲಿ ಎಂದಿನಿಂದ ಅನುಷ್ಠಾನಗೊಳಿಸಲಾಗುವುದು?

ಸರ್ಕಾರದ ಎಲ್ಲ ಇಲಾಖೆಗಳಲ್ಲೂ ವಿದ್ಯುನ್ಮಾನ ಆಡಳಿತವನ್ನು ಅಳವಡಿಸುವ ಗುರಿಯನ್ನು ಸರ್ಕಾರವು ಹೊಂದಿದ್ದು, ಈ ಬಗ್ಗೆ ಒಂದು ವಿವರವಾದ ರೋಡ್ ಮ್ಯಾಪ್ ತಯಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆಯಾಯ ಇಲಾಖೆ ಅದರ ಕಾರ್ಯವ್ಯಾಪ್ತಿಯೊಳಗೆ ಬರುವ ಕಾರ್ಯಗಳಿಗೆ ಸಂಬಂಧಿಸಿದಂತೆ ವಾರ್ಷಿಕ ವಿದ್ಯುನ್ಮಾನ ಆಡಳಿತ ಕ್ರಿಯಾಯೋಜನೆಗಳನ್ನು ತಯಾರಿಸಿ ಅದಕ್ಕೆ ಸಕ್ಷಮ